# ಉಪಾಧ್ಯಾಯರಿಗಾಗಿ ಮಾರ್ಗದರ್ಶಿ ಸೂತ್ರಗಳು

ಸ್ವಾಮಿ ನಿತ್ಯಸ್ಥಾನಂದ

**ಹಿಂದಿನ ಸಂಚಿಕೆಯಲ್ಲಿ**

ಸ್ವಾಮಿ ವಿವೇಕಾನಂದರ ಪ್ರಕಾರ ನಮ್ಮನ್ನು ಪರಿಪೂರ್ಣ ವ್ಯಕ್ತಿಯನ್ನಾಗಿ ಮಾಡುವುದು ಶಿಕ್ಷಣದ ಗುರಿ. ಪ್ರತಿಯೊಂದರಲ್ಲೂ ನಾವು ಪರಿಪೂರ್ಣರಾಗಿರಬೇಕು. ದೈಹಿಕ, ಮಾನಸಿಕ, ಆಧ್ಯಾತ್ಮಿಕ ಪರಿಪೂರ್ಣತೆ ಶಿಕ್ಷಣದ ಗುರಿ. ಅದು ನಮ್ಮೊಳಗೇ ಇದೆ, ನಾವು ಹೊರಗಡೆಯಿಂದ ಪಡೆಯಬೇಕಾಗಿಲ್ಲ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಶಿಕ್ಷಣವು ವ್ಯಕ್ತಿಯನ್ನು ಸ್ವಾವಲಂಬಿಯನ್ನಾಗಿ ಮಾಡಬೇಕು.

**ಸ್ವಾ**ಮಿ ವಿವೇಕಾನಂದರ ದೃಷ್ಟಿಯಲ್ಲಿ ಶಿಕ್ಷಣವು ವ್ಯಕ್ತಿಯೊಬ್ಬನಿಗೆ ವಿಚಾರ ಸ್ವಾತಂತ್ರ್ಯವನ್ನು ನೀಡಬೇಕು. ತಾನೇ ಸ್ವತಂತ್ರವಾಗಿ ವಿಚಾರಮಾಡಿ ಯಾವುದು ಸರಿ ಯಾವುದು ತಪ್ಪು ಎಂಬುದನ್ನು ನಿರ್ಣಯಿಸುವ ಸಾಮರ್ಥ್ಯ ಅವನಿಗೆ ಶಿಕ್ಷಣದಿಂದ ಬರಬೇಕು. ಈಗ ವೈಚಾರಿಕ ಪರಿಧಿ ಬಹಳ ವಿಸ್ತಾರವಾಗಿದೆ. ಪ್ರತಿಯೊಂದು ಕ್ಷೇತ್ರದಲ್ಲೂ ಅನೇಕ ಮತಪಂಥಗಳು ಹುಟ್ಟಿಕೊಂಡಿವೆ. ಹಲವಾರು ಪ್ರಭಾವಗಳಿಗೆ ವ್ಯಕ್ತಿ ಒಳಗಾಗುತ್ತಾನೆ. ಸ್ವತಂತ್ರ ವಿಚಾರಧಾರೆ ನಮಗೆ ಇಲ್ಲದಿದ್ದರೆ ನಾವು ಗಾಳಿಗೆ ತೂರಾಡುವ ತರಗೆಲೆಯಂತಾಗಿ ಬಿಡುತ್ತೇವೆ. ಶಿಕ್ಷಣ ನಮಗೆ ಪ್ರೌಢಿಮೆಯನ್ನು ನೀಡಬೇಕು – ಅಂದರೆ ನಮಗೆ ಭಾವನಾತ್ಮಕ ಸ್ವಾತಂತ್ರ್ಯವನ್ನು ನೀಡಬೇಕು. ಚಿಕ್ಕ ಮಕ್ಕಳಂತೆ ಇತರರ ಪ್ರೀತಿ, ಸಹಾನುಭೂತಿ, ಪ್ರಶಂಸೆಗಳಿಗಾಗಿ ಹಾತೊರೆಯುವ ಪ್ರವೃತ್ತಿ ಆರೋಗ್ಯಕರವಲ್ಲ. ಇಂತಹ ಪ್ರವೃತ್ತಿ ಇದ್ದರೆ ಎಷ್ಟೇ ಪ್ರೀತಿ, ಸಹಾನುಭೂತಿ, ಪ್ರಶಂಸೆ ಇತ್ಯಾದಿಗಳಿದ್ದರೂ ವ್ಯಕ್ತಿ ಒಂಟಿತನವನ್ನು ಅನುಭವಿಸುತ್ತಾನೆ. ವ್ಯಕ್ತಿಯು ತುಂಬು ಜೀವನವನ್ನು, ಸಾರ್ಥಕ ಜೀವನವನ್ನು ನಡೆಸುವಂತಾದರೆ ಒಂಟಿತನದ ಭಾವ ಇರುವುದಿಲ್ಲ ಮತ್ತು ಭಾವನಾತ್ಮಕ ಪರಾವಲಂಬನೆಯೂ ಇರುವುದಿಲ್ಲ. ಪ್ರೀತಿ, ಸಹಾನುಭೂತಿ, ಪ್ರಶಂಸೆ ಇತ್ಯಾದಿಗಳನ್ನು ಇತರರಿಂದ ಬಯಸುವ ಬದಲು ತಾನೇ ಇತರರಿಗೆ ಅವನ್ನು ನೀಡುವಂತಹ ಸ್ಥಿತಿ ಉಂಟಾಗಬೇಕು. ಇಂತಹ ಹಿರಿತನವನ್ನು, ಉದಾರತೆಯನ್ನು ಶಿಕ್ಷಣವು ವ್ಯಕ್ತಿಗೆ ನೀಡಬೇಕು. ಇಂದಿನ ಶಿಕ್ಷಣವು ವ್ಯಕ್ತಿಯನ್ನು ದೊಡ್ಡವನನ್ನಾಗಿ ಮಾಡದೆ ಕುಬ್ಜನನ್ನಾಗಿಸುತ್ತಿದೆ; ಅವನು ಹಿರಿತನವನ್ನಲ್ಲದೆ ಸಿರಿತನವನ್ನು ಬಯಸುವಂತೆ ಮಾಡುತ್ತಿದೆ.

ಶೀಲನಿರ್ಮಾಣವೇ ಶಿಕ್ಷಣದ ಮೂಲಭೂತ ಧ್ಯೇಯ ಎಂಬುದು ವಿವೇಕಾನಂದರ ಅಭಿಪ್ರಾಯ. "ನಮ್ಮ ಜೀವನವನ್ನು ರೂಪಿಸುವ, ನಮ್ಮನ್ನು ಮನುಷ್ಯರನ್ನಾಗಿ ಮಾಡುವ ಮತ್ತು ಶೀಲನಿರ್ಮಾಣ ಮಾಡುವ ರೀತಿಯಲ್ಲಿ ನಾವು ವಿಚಾರಗಳನ್ನು ಅರಗಿಸಿಕೊಳ್ಳಬೇಕು" ಎಂದು ಅವರು ಹೇಳುತ್ತಾರೆ. ನೈತಿಕ ಪರಿಪೂರ್ಣತೆ ಇಲ್ಲದೆ ನಾವು ಪಡೆದ ಜ್ಞಾನವನ್ನು ಸರಿಯಾದ ರೀತಿಯಲ್ಲಿ, ಸೃಜನಾತ್ಮಕವಾಗಿ ಉಪಯೋಗಿಸಲಾಗುವುದಿಲ್ಲ. ನಮ್ಮ ಮೇಲೆ ನಮಗೆ ಹತೋಟಿಯಿರುವುದಿಲ್ಲ. ಜ್ಞಾನವೆಂಬುದು ಶಕ್ತಿ – ಒಂದು ಹರಿತವಾದ ಆಯುಧವಿದ್ದಂತೆ. ಈ ಆಯುಧವನ್ನು ಅನೈತಿಕ, ಕ್ರೂರಿ ಮತ್ತು ಬೇಜವಾಬ್ದಾರಿಯ ವ್ಯಕ್ತಿಗೆ ಕೊಟ್ಟರೆ ಅವನು ಅದನ್ನು ಕೆಟ್ಟದ್ದಕ್ಕೆ, ನಾಶಮಾಡುವುದಕ್ಕೆ ಉಪಯೋಗಿಸುತ್ತಾನೆ. ಅದೇ ಆಯುಧವನ್ನು ಉತ್ತಮ, ಶೀಲವಂತ, ಜವಾಬ್ದಾರಿಯುತ ವ್ಯಕ್ತಿಗೆ ನೀಡಿದರೆ ಅವನು ಅದನ್ನು ರಚನಾತ್ಮಕವಾಗಿ ಉಪಯೋಗಿಸುತ್ತಾನೆ. ನಾವು ಆಯುಧವನ್ನು, ವ್ಯಕ್ತಿಗಳಿಗೆ ಅದನ್ನು ಉಪಯೋಗಿಸುವ ವಿಧಾನವನ್ನು ತಿಳಿಸಿಕೊಡದೆ ಕೊಡುತ್ತಿದ್ದೇವೆ. ಇದು ಒಂದು ಮಗುವಿಗೆ ಆಯುಧವನ್ನು ಕೊಟ್ಟಂತಾಗುತ್ತಿದೆ. ಅದು ಆ ಆಯುಧದಿಂದ ಕೈಗೆ ಸಿಕ್ಕಿದ್ದನ್ನೆಲ್ಲ ಕತ್ತರಿಸುತ್ತದೆ ಮತ್ತು ತನ್ನ ಕೈಯನ್ನೂ ಕತ್ತರಿಸಿಕೊಳ್ಳುತ್ತದೆ.

ನೈತಿಕತೆ ಇಲ್ಲದೆ ಅಪಾರ ಯುವಶಕ್ತಿ ವಿನಾಶಕರ ಶಕ್ತಿಯಾಗಿ ಪರಿಣಮಿಸುವ ಸಂಭವ ಹೆಚ್ಚು. ನೈತಿಕ ಪ್ರಜ್ಞೆ ನಮ್ಮನ್ನು ಜವಾಬ್ದಾರಿಯುತರನ್ನಾಗಿ ಮಾಡುವುದು. ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಜವಾಬ್ದಾರಿಯನ್ನು ಮನಗಂಡರೆ ಮುಷ್ಕರ, ಘೇರಾವ್, ಹೊಡೆದಾಟ ಮುಂತಾದ ವಿಧ್ವಂಸಕ ಕೃತ್ಯಗಳು ಇರುವುದಿಲ್ಲ. ಇಂಗ್ಲಿಷ್‌ನಲ್ಲಿ ಕಿಡಿಗೇಡಿಗಳನ್ನು ಕುರಿತಾದ ಒಂದು ಮಾತಿದೆ: The man who rows the boat, seldom has time to rock it– "ದೋಣಿ ನಡೆಸುವವನು ಅದನ್ನು ಮುಳುಗಿಸುವ ಪ್ರಯತ್ನ ಎಂದೂ ಮಾಡುವುದಿಲ್ಲ." ಜವಾಬ್ದಾರಿಯ ಪ್ರಜ್ಞೆಯುಳ್ಳವನಾವನೂ ವಿನಾಶಾತ್ಮಕ ಕಾರ್ಯದಲ್ಲಿ ತೊಡಗುವುದಿಲ್ಲ, ಯಾವಾಗಲೂ ರಚನಾತ್ಮಕ ಚಟುವಟಿಕೆಯಲ್ಲೇ ತೊಡಗಿರುತ್ತಾನೆ. ಜವಾಬ್ದಾರಿಯ ಪ್ರಜ್ಞೆಯನ್ನು ಕುರಿತು ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ನಾವೇ ಎಲ್ಲಕ್ಕೂ ಹೊಣೆಗಾರರಾದಾಗ ಮಾತ್ರ ನಮಗೆ ಅತಿ ಶ್ರೇಷ್ಠವಾದ ಕೆಲಸವನ್ನು ಮಾಡಲು ಸಾಧ್ಯವಾಗುತ್ತದೆ. ನಾನು ನಿಮ್ಮನ್ನೆಲ್ಲ ಕೇಳುತ್ತೇನೆ – ನಿಮ್ಮ ಕೈಗೆ ಒಂದು ಸಣ್ಣ ಮಗುವನ್ನು ಕೊಟ್ಟರೆ ನೀವು ಹೇಗೆ ವರ್ತಿಸುತ್ತೀರಿ? ಆ ಕ್ಷಣಕ್ಕೆ ನಿಮ್ಮ ಇಡೀ ಜೀವನ ಬದಲಾವಣೆಗೊಳ್ಳುವುದು. ನೀವು ಏನಾದರೂ ಆಗಿರಿ. ತಾತ್ಕಾಲಿಕವಾಗಿಯಾದರೂ ನೀವು ನಿಸ್ವಾರ್ಥಿಗಳಾಗಬೇಕು. ಜವಾಬ್ದಾರಿ ನಿಮ್ಮನ್ನು ಬದಲಾಯಿಸುವುದು. ನಾವೇ ಎಲ್ಲಕ್ಕೂ ಎಂದು ಹೊಣೆಗಾರರಾಗುವೆವೊ ಆಗ ನಮ್ಮ ಅತಿ ಶ್ರೇಷ್ಠ ಶೀಲ ವ್ಯಕ್ತವಾಗುವುದು... ನನ್ನ ಅದೃಷ್ಟಕ್ಕೆ ನಾನು ಹೊಣೆ." (ವ್ಯಕ್ತಿತ್ವ ನಿರ್ಮಾಣ, ಪು. ೪೦)

> **ನನ್ನ ವಿದ್ಯಾಭ್ಯಾಸದ ಭಾವನೆಯೇ ಗುರುಗೃಹವಾಸ. ಗುರುವಿನ ಆದರ್ಶ ಜೀವನವಿಲ್ಲದೆ ವಿದ್ಯಾಭ್ಯಾಸವಿಲ್ಲ. ಬಾಲ್ಯದಿಂದಲೆ ಒಬ್ಬನು ಯಾರ ಶೀಲ ಜಾಜ್ವಲ್ಯಮಾನವಾಗಿ ಬೆಳಗುತ್ತಿದೆಯೋ ಅಂತಹವರ ಹತ್ತಿರ ಇರಬೇಕು. ಪರಮ ಪವಿತ್ರವಾದ ಉಪದೇಶದ ಸಚೇತನ ಉದಾಹರಣೆಯೊಂದು ಅವನ ಮುಂದೆ ಇರಬೇಕು. ನಮ್ಮ ದೇಶದಲ್ಲಿ ವಿದ್ಯಾದಾನ ಮಾಡುವವರು ಯಾವಾಗಲೂ ತ್ಯಾಗಿಗಳಾಗಿದ್ದರು. ವಿದ್ಯಾದಾನದ ಜವಾಬ್ದಾರಿ ಪುನಃ ತ್ಯಾಗಿಗಳ ಮೇಲೆ ಬೀಳಬೇಕು.**
>
> **–ಸ್ವಾಮಿ ವಿವೇಕಾನಂದ**

ಜವಾಬ್ದಾರಿಗಳನ್ನು ವೈಯಕ್ತಿಕ ಮತ್ತು ಸಾಮಾಜಿಕ ಎಂದು ನಾವು ವಿಭಾಗಿಸಬಹುದು. ವೈಯಕ್ತಿಕ ಜವಾಬ್ದಾರಿಯುಳ್ಳವನು ತನ್ನ ಸುಖದುಃಖಗಳಿಗೆಲ್ಲ ತಾನೇ ಹೊಣೆ ಎಂದು ಭಾವಿಸುವನು. ತನ್ನ ಸ್ಥಿತಿಗಾಗಿ ಇತರರನ್ನಾಗಲೀ, ಸಮಾಜವನ್ನಾಗಲಿ ಅಥವಾ ದೇವರನ್ನಾಗಲಿ ದೂರುವುದಿಲ್ಲ, ದೂಷಿಸುವುದೂ ಇಲ್ಲ; ತನ್ನ ತಪ್ಪನ್ನು ಒಪ್ಪಿಕೊಳ್ಳುತ್ತಾನೆ, ಇತರರ ಮೇಲೆ ಹೊರಿಸುವುದಿಲ್ಲ, ತನ್ನ ಹೊಣೆಯನ್ನು ಇತರರ ಮೇಲೆ ಹೇರುವುದಿಲ್ಲ ಮತ್ತು ಕರ್ತವ್ಯಗಳಿಂದ ಜವಾಬ್ದಾರಿಯಿಂದ ನುಣುಚಿಕೊಳ್ಳುವುದಿಲ್ಲ. ಅನೇಕರು ಶಕ್ತಿ ಸಾಮರ್ಥ್ಯಗಳಿದ್ದರೂ ವಿದ್ಯಾವಂತರಾಗಿದ್ದರೂ ಯಾವುದೇ ಜವಾಬ್ದಾರಿಯನ್ನು ಸ್ವೀಕರಿಸಲು ಇಷ್ಟಪಡುವುದಿಲ್ಲ. ಇದು ಆಂತರಿಕ ಕೊರತೆಯ ಪರಿಣಾಮ. ಶಿಕ್ಷಣ ಈ ಕೊರತೆಯನ್ನು ನೀಗಿಸಬೇಕು, ಅದು ವ್ಯಕ್ತಿಯಲ್ಲಿ ಜವಾಬ್ದಾರಿಯ ಪ್ರಜ್ಞೆಯನ್ನು ಕೆರಳಿಸಬೇಕು. ವೈಯಕ್ತಿಕ ಜವಾಬ್ದಾರಿಯುಳ್ಳವನು ಸಾಮಾಜಿಕ ಜವಾಬ್ದಾರಿಯನ್ನೂ ಹೊಂದಿರುತ್ತಾನೆ. ಸಮಾಜಕ್ಕೆ ಹಾನಿಯಾದರೆ ತನಗೇ ಹಾನಿ ಎಂಬ ಅರಿವು ಅವನಿಗಿರುತ್ತದೆ, ಸಮಾಜವನ್ನು ಆರೋಗ್ಯವಂತವಾಗಿಡುವುದು ತನ್ನ ಜವಾಬ್ದಾರಿ ಎಂಬ ಅರಿವು ಅವನಲ್ಲಿ ಜಾಗೃತವಾಗಿರುತ್ತದೆ. ಅವನು ಸಮಾಜಕ್ಕೆ ಹಾನಿಯನ್ನುಂಟುಮಾಡದಿರುವುದು ಮಾತ್ರವಲ್ಲದೆ ಸಮಾಜದ ಒಳಿತಿಗಾಗಿ ಶ್ರಮಿಸುತ್ತಾನೆ. ಇಂತಹ ಸಾಮಾಜಿಕ ಪ್ರಜ್ಞೆ, ಕಳಕಳಿ ಶಿಕ್ಷಣದಿಂದ ಉಂಟಾಗದಿದ್ದರೆ ಆ ಶಿಕ್ಷಣ ಹೆಸರಿಗೆ ತಕ್ಕದಾದುದಲ್ಲ. ಆದ್ದರಿಂದಲೇ ವಿವೇಕಾನಂದರು ಹೇಳುತ್ತಾರೆ: "ಎಲ್ಲಿಯವರೆಗೂ ಲಕ್ಷಾಂತರ ಜನರು ಅಜ್ಞಾನದಲ್ಲಿ ಇರುವರೊ, ಹಸಿವಿನಿಂದ ನರಳುತ್ತಿರುವರೊ, ಅಲ್ಲಿಯವರೆಗೂ ಯಾರು ಅವರ ದುಡಿಮೆಯಿಂದ ತಮ್ಮ ವಿದ್ಯಾಭ್ಯಾಸವನ್ನು ಪಡೆದೂ ಅಂಥವರ ಕಡೆಗೆ ಸ್ವಲ್ಪವೂ ಗಮನ ಕೊಡದೆ ಇರುವರೊ ಅವರನ್ನು ವಿಶ್ವಾಸಘಾತಕರೆಂದು ಕರೆಯುತ್ತೇನೆ."

ಆದ್ದರಿಂದ ಸ್ವಾಮಿ ವಿವೇಕಾನಂದರ ಪ್ರಕಾರ ಶಿಕ್ಷಣವು ವ್ಯಕ್ತಿಯಲ್ಲಿ ಸೇವಾ ಮನೋಭಾವವನ್ನು ಬೆಳೆಸಬೇಕು. ಅವರ ಪ್ರಕಾರ ಇತರರ ಒಳಿತನ್ನು ಪರಿಗಣಿಸದೆ ಯಾರೂ ತಮ್ಮ ಒಳಿತನ್ನು ಸಾಧಿಸಲಾಗುವುದಿಲ್ಲ. ವ್ಯಕ್ತಿಗಳು ಒಟ್ಟು ಸಮಾಜವೆಂಬ ಶರೀರದ ಅವಿಭಾಜ್ಯ ಅಂಗಗಳು. ಒಂದು ದೇಹದಲ್ಲಿ ಯಾವುದೇ ಒಂದು ಅಂಗವು ಆರೋಗ್ಯವಾಗಿರಬೇಕಾದರೆ ಇಡೀ ದೇಹವೂ ಆರೋಗ್ಯವಾಗಿರಬೇಕು. ಒಟ್ಟು ಸಮಾಜವನ್ನು ಆರೋಗ್ಯವಾಗಿರಿಸುವ ಪ್ರಯತ್ನವೇ ಸೇವೆ. ಸಮಾಜ ಭ್ರಷ್ಟವಾದರೆ, ವಿಷಪೂರಿತವಾದರೆ ಎಲ್ಲರೂ ಅದರ ದುಷ್ಪರಿಣಾಮಕ್ಕೆ ಒಳಗಾಗಬೇಕಾಗುತ್ತದೆ. ಸ್ವಹಿತದೃಷ್ಟಿಯಿಂದಾದರೂ ಸಮಾಜವನ್ನು ಸುಸ್ಥಿತಿಯಲ್ಲಿಡಲು ನಾವು ಪ್ರಯತ್ನಿಸಬೇಕು.

ಸಮಾಜಸೇವೆಯೆಂದರೆ ಹೊಸದಾಗಿ ನಾವು ಏನನ್ನೂ ಮಾಡಬೇಕಾಗಿಲ್ಲ. ಆಸ್ಪತ್ರೆ, ಸ್ಕೂಲು, ಹಾಸ್ಟೆಲ್ ಮುಂತಾದವುಗಳನ್ನೂ ಪ್ರಾರಂಭಿಸಬೇಕಾಗಿಲ್ಲ. ನಮ್ಮ ಪಾಲಿಗೆ ಬಂದ ಕೆಲಸವನ್ನು ಕರ್ತವ್ಯನಿಷ್ಠೆಯಿಂದ, ಇತರರ ಹಿತಚಿಂತನೆಯಿಂದ ನೆರವೇರಿಸಿದರೆ ಅದೇ ದೊಡ್ಡ ಸೇವೆಯಾಗುತ್ತದೆ. ನಮ್ಮ ಪಕ್ಕದಲ್ಲಿರುವವನಿಗೆ ನಾಲ್ಕು ಒಳ್ಳೆಯ ಮಾತುಗಳನ್ನಾಡುವುದು, ಸಕಾಲದಲ್ಲಿ ಸಹಾಯ ಮಾಡುವುದು ಇತ್ಯಾದಿಗಳೇ ದೊಡ್ಡ ಸೇವೆಯಾಗುತ್ತದೆ. ವಿವೇಕಾನಂದರು ಸ್ವಾರ್ಥಪರ ಜೀವನವನ್ನು ಅತ್ಯಂತ ಕಟುವಾಗಿ ಖಂಡಿಸುತ್ತಾರೆ: "ವಿಕಾಸವೇ ಜೀವನ, ಸಂಕೋಚವೇ ಮರಣ. ತನ್ನ ಸ್ವಂತ ಸುಖವನ್ನು ನೋಡಿಕೊಳ್ಳುತ್ತ ಯಾರು ಸ್ವಾರ್ಥಪರರಾಗಿ, ಸೋಮಾರಿಗಳಾಗಿ ಕಾಲ ಕಳೆಯುತ್ತಿರುವರೊ ಅವರಿಗೆ ನರಕದಲ್ಲಿಯೂ ಸ್ಥಳವಿಲ್ಲ." (ವ್ಯಕ್ತಿತ್ವ ನಿರ್ಮಾಣ, ಪು. ೫೮)

ನೀತಿಬದ್ಧ ನಡವಳಿಕೆಯ ಮೂಲಕವೂ ನಾವು ಸಮಾಜಕ್ಕೆ ಸೇವೆ ಸಲ್ಲಿಸಬೇಕು. ಸುಳ್ಳು ಹೇಳುವುದು, ವಂಚಿಸುವುದು, ಅಪ್ರಾಮಾಣಿಕತೆ ಇವೆಲ್ಲ ಸಮಾಜವೆಂಬ ಸರೋವರಕ್ಕೆ ವಿಷ ಬೆರೆಸಿದಂತೆ. ನೈತಿಕತೆಗೆ ನಾವು ಪ್ರಾಧಾನ್ಯ ನೀಡದಿದ್ದರೆ, ಅನೈತಿಕತೆಗೆ ಪ್ರೋತ್ಸಾಹವನ್ನು ನೀಡಿದರೆ ಕ್ರಮೇಣ ಸಮಾಜ ಭ್ರಷ್ಟವಾಗುತ್ತದೆ, ವಿಷಪೂರಿತವಾಗುತ್ತದೆ. ಯಾರೂ ಯಾರನ್ನೂ ನಂಬದಂತಹ ವಾತಾವರಣ ಸೃಷ್ಟಿಯಾಗುತ್ತದೆ. ಇದಕ್ಕಿಂತ ದುಃಖದ ಸ್ಥಿತಿ ಇನ್ನಾವುದಿದೆ? ನಾವೂ ನೀತಿವಂತರಾಗಿದ್ದು ಇತರರೂ ನೀತಿವಂತ ಜೀವನ ನಡೆಸಲು ನಾವು ಸಹಾಯ ಮಾಡಬೇಕು. ಇದಿಲ್ಲದಿದ್ದರೆ ನಾವು ಮಾಡಿದ ಎಲ್ಲ ಸೇವೆಯೂ ನೀರಿನಲ್ಲಿ ಹೋಮ ಮಾಡಿದಂತಾಗುತ್ತದೆ. ವಿವೇಕಾನಂದರು ಹೇಳುತ್ತಾರೆ: "ನೀವು ನೀವು ಎಲ್ಲ ಮನೆಗಳನ್ನೂ ದಾನಗೃಹಗಳಾಗಿ ಪರಿವರ್ತಿಸಬಹುದು, ಭೂಮಿಯನ್ನೆಲ್ಲ ಆಸ್ಪತ್ರೆಗಳಿಂದ ತುಂಬಿಸಬಹುದು. ಆದರೆ ಜನರ ಚಾರಿತ್ರ್ಯ ಬದಲಾಗದವರೆಗೂ ದುಃಖ ನಿವಾರಣೆ ಆಗಲಾರದು." ಒಳಿತಿನ ಶಕ್ತಿಯಲ್ಲಿ ಜನಸಾಮಾನ್ಯರಿಗೆ ನಂಬಿಕೆ ಹುಟ್ಟಿಸುವುದು ನಾವು ಮಾಡಬೇಕಾಗಿರುವ ದೊಡ್ಡ ಸೇವೆ. ನಮಗೆಲ್ಲರಿಗೂ ಒಳಿತಿನ ಶಕ್ತಿಯಲ್ಲಿ ಶ್ರದ್ಧೆ ಇರಬೇಕೆಂದು ವಿವೇಕಾನಂದರು ಒತ್ತಿ ಹೇಳುತ್ತಾರೆ. (ಮುಂದುವರಿಯುವುದು)